ಕಛೇರಿ : 080-2287 4039
080-2235 4085
ಫ್ಯಾಕ್ಸ್ : 080-2228 5591

ಕರ್ನಾಟಕ ಸರ್ಕಾರ

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಸೇವೆಗಳು

ಸಂಖ್ಯೆ:-ಕೆಎಸ್‌ಎಪಿಎಸ್/ಜೆಡಿ(ಐಸಿಟಿಸಿ)(ಪಿಪಿಟಿಸಿಟಿ)/109/2009-10 ದಿನಾಂಕ:-01/01/2010

### ಸುತ್ತೋಲೆ

**ವಿಷಯ-**ಎಚ್ ಐ ವಿ ಸೋಂಕಿತರಿಗೆ ವೈದ್ಯಕೀಯ ಸೇವೆ ಮತ್ತು ಮುಂದುವರಿದ ಕಳಂಕ-ತಾರತಮ್ಯ.

ಕಳಂಕ-ತಾರತಮ್ಯ ಇರುವಂತಹ ಸಂದರ್ಭದಲ್ಲೂ ಹೆಚ್ ಐ ವಿ ಸೋಂಕಿತರಿಗೆ ವೈದ್ಯಕೀಯ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆಯಂಥ ಸೌಲಭ್ಯ ಒದಗಿಸುವಲ್ಲಿ ಕರ್ನಾಟಕ ಸ್ಟೇಟ್ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳು ಹಿಂದೆ ಬಿದ್ದಿಲ್ಲ.

ಪಿಪಿಟಿಸಿಟಿ ಚಟುವಟಿಕೆಗಳು ಇದೀಗ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್ ಆರ್ ಎಚ್ ಎಂ) ದ ಒಂದು ಭಾಗವಾಗಿರುವ ಕಾರಣ ಪ್ರತಿಯೊಬ್ಬರಿಗೂ ಪಿಪಿಟಿಸಿಟಿ ಸೇವೆಗಳು ತಲುಪುವಲ್ಲಿ ಕರ್ನಾಟಕ ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿದೆ. ಗರ್ಭಿಣಿ ತಾಯಂದಿರಲ್ಲಿ ಎಚ್ ಐ ವಿಯನ್ನು ಪತ್ತೆ ಹಚ್ಚುವಲ್ಲಿ ರಾಜ್ಯದ ಸಾಧನೆ ಅಪಾರವಾಗಿದ್ದು, ಇದನ್ನು ನ್ಯಾಕೋ ಮುಕ್ತ ಕಂಠದಿಂದ ಶ್ಲಾಘಿಸಿದೆ.

ಆದಾಗ್ಯೂ ನಮಗೆ ಸಿಗುವ ದತ್ತಾಂಶಗಳು ಮತ್ತು ಕೆಲವು ಪ್ರಕರಣಗಳನ್ನು ಆಧರಿಸಿ ಕೆಲವು ವೈದ್ಯಕೀಯ ಸಂಸ್ಥೆಗಳು ಸೋಂಕಿತ ಗರ್ಭಿಣಿಯರ ಹೆರಿಗೆ ಮಾಡಿಸಲು ಮತ್ತು ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದಂತೆ ವೈದ್ಯಕೀಯ ಸೌಲಭ್ಯ ಒದಗಿಸಲು ಹಿಂಜರಿಯುತ್ತಿರುವುದು ಗಮನಕ್ಕೆ ಬಂದಿದೆ.

ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಸೋಂಕಿತ ಗರ್ಭಿಣಿಗೆ ಸರಿಯಾದ ರೀತಿಯಲ್ಲಿ ವೈದ್ಯಕೀಯ ಸೌಲಭ್ಯಗಳು ದೊರೆಯುವಂತೆ ಮಾಡುವುದು ಮತ್ತು ಅದರ ಮೇಲ್ವಿಚಾರಣೆ ನಡೆಸುವುದು ಅಗತ್ಯವಾಗಿದೆ. ಇದರ ಜೊತೆಗೆ ಪ್ರಸವ ಪೂರ್ವ ಮತ್ತು ಪ್ರಸವದ ನಂತರ ಆರೈಕೆ ಹಾಗೂ ಮಗುವಿನ ಆರೈಕೆಯೂ ಸೇರಿದಂತೆ ಪ್ರತಿಯೊಂದು ಸೌಲಭ್ಯವೂ ಚಾಚೂ ತಪ್ಪದೆ ಸೋಂಕಿತ ಮಹಿಳೆಯರಿಗೆ ದೊರಕುವಂತೆ ಮಾಡುವುದು ಅಗತ್ಯವಾಗಿದೆ. ಇದು ಕಳಂಕ ತಾರತಮ್ಯವನ್ನು ದೂರ ಮಾಡುವಲ್ಲಿ ಸಹಕಾರಿಯಾಗಲಿದೆ.

ಈ ದಿಶೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಜಿಲ್ಲಾ ಶಸ್ತ್ರ ಚಿಕಿತ್ಸಕರು / ಆಸ್ಪತ್ರೆ ಅಧಿಕ್ಷಕರು / ಆಡಳಿತಾಧಿಕಾರಿಗಳು ನಿಮ್ಮ ಅಧೀನದಲ್ಲಿ ಬರುವ ಎಲ್ಲಾ ಆಸ್ಪತ್ರೆಗಳಲ್ಲಿ ಈ ಬಗ್ಗೆ ಕಾಳಜಿ ವಹಿಸಲು ಹಾಗೂ ಮಾಸಿಕ ಸಭೆಗಳಲ್ಲಿ ಈ ಬಗ್ಗೆ ಪರಿಶೀಲಿಸಲು ಸೂಚಿಸಿದೆ.

ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.

ಗೆ

1) ಎಲ್ಲಾ ಆಸ್ಪತ್ರೆಗಳ ಜಿಲ್ಲಾ ಶಸ್ತ್ರಚಿಕಿತ್ಸಕರು / ಅಧೀಕ್ಷಕರು / ಆಡಳಿತ ವೈದ್ಯಾಧಿಕಾರಿಗಳು.

ಪ್ರತಿ

1) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

3ನೇ ಮಹಡಿ, ಐಪಿಪಿ ಬಿಲ್ಡಿಂಗ್, ಆನಂದ ರಾವ್ ಸರ್ಕಲ್, ಬೆಂಗಳೂರು - 560 009.

Scanned by CamScanner